**<u>2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ,</u>**

**<u>ಸಾಃ ಗೋಕಾಕ</u>**

**ಸಿ.ಸಿ. ನಂ. 568/2016**

ಆರೋಪಿತರ ಹೆಸರುಃ 1) ಲಕ್ಷ್ಮಣ ಯಲ್ಲಪ್ಪ ನಂದಗಾಂವ
ಸಾಃ ಮಕ್ಕಳಗೇರಿ, ತಾಃ ಗೋಕಾಕ.

<u>ಆಪಾದನೆ</u>

ಮೊದಲನೆಯದಾಗಿ, ದಿನಾಂಕ 24-11-2015 ರಂದು ಸಂಜೆ 04-45 ಗಂಟೆ ಸುಮಾರಿಗೆ ಗೋಕಾಕ ಗ್ರಾಮೀಣ ಪೊಲೀಸ್ ಠಾಣಾ ಹದ್ದಿ ಪೈಕಿ ಗೋಕಾಕ ತಾಲೂಕಿನ ಮಕ್ಕಳಗೇರಿ ಗ್ರಾಮದ ಹದ್ದಿ ಮಕ್ಕಳಗೇರಿಯಿಂದ ಪುಡಕಲಕಟ್ಟಿ ಗ್ರಾಮಕ್ಕೆ ಸಾಗಿದ ರಸ್ತೆಯ ಮೇಲೆ ದಂಡಿನ ಎಂಬುವವರ ಜಮೀನದ ಹತ್ತಿರ ರಸ್ತೆಯ ಪೂರ್ವ ದಂಡೆಯಲ್ಲಿ ಆರೋಪಿತನಾದ ನೀನು ನಡೆಸುತ್ತಿದ್ದ ಜೀಪ ನಂಬರ ಕೆಎ-**29**/ಪಿ-**5787** ನೇದ್ದನ್ನು ಪುಡಕಲಕಟ್ಟಿ ಕಡೆಯಿಂದ ಮಕ್ಕಳಗೇರಿ ಕಡೆಗೆ ಅತೀ ವೇಗದಿಂದ ಮತ್ತು ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಬಂದು ರಸ್ತೆ ದಂಡೆಯಿಂದಾ ಪುಡಕಲಕಟ್ಟಿ ಕಡೆಗೆ ನಡೆಯುತ್ತಾ ಹೊರಟಿದ್ದ ಚಾಸಾ-1 ಮಿಟ್ಟುಸಾಬ ಇವರ ತಾಯಿ ಶ್ರೀಮತಿ ಇಮಾಮಬು ಸರದಾರಸಾಬ ಹೂಲಿಕಟ್ಟಿ ಇವರಿಗೆ ಹಾಯಿಸಿ ಅಪಘಾತ ಪಡಿಸಿ ಅಪರಾಧ ಕಲಂ 279 ಐಪಿಸಿ ಅಡಿಯಲ್ಲಿ ಅಪರಾಧ ಮಾಡಿರುವಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ನಿನ್ನ ವಾಹನವನ್ನು ಅಪಘಾತ ಪಡಿಸಿ ಚಾಸಾ-1 ರವರ ತಾಯಿ ಮೃತ ಶ್ರೀಮತಿ ಇಮಾಮಬು ಸರದಾರಸಾಬ ಹೂಲಿಕಟ್ಟಿ ಇವರ ತಲೆಗೆ, ಹಣೆಗೆ, ಕೈಕಾಲುಗಳಿಗೆ ಸಾದಾ ಹಾಗೂ ಭಾರಿಗಾಯಪಡಿಸಿ ಮತ್ತು ನಿನಗೂ ಸಹ ಮೈ ಕೈಗೆ, ತಲೆಗೆ ಸಾದಾ ಗಾಯಪಡಿಸಿಕೊಂಡು ಅಪರಾಧ ಕಲಂ 337 ಐಪಿಸಿ ರಡಿಯಲ್ಲಿ ಅಪರಾಧ ಮಾಡಿರುವಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ನಿನ್ನ ವಾಹನವನ್ನು ಅಪಘಾತ ಪಡಿಸಿ ಚಾಸಾ-1 ರವರ ತಾಯಿ ಮೃತ ಶ್ರೀಮತಿ

ಇಮಾಮಬು ಸರದಾರಸಾಬ ಹೂಲಿಕಟ್ಟಿ ಇವರಿಗೆ ಭಾರಿಗಾಯಪಡಿಸಿ ಸ್ಥಳದಲ್ಲಿಯೇ ಮರಣ ಪಡಿಸಿದ ಅಪರಾಧ ಕಲಂ 304(ಎ) ಐಪಿಸಿ ರಡಿಯಲ್ಲಿ ಅಪರಾಧ ಮಾಡಿರುವಿ.

ಪ್ರಃ 1 ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉಃ

ಪ್ರಃ 2 ನೀನು ಗುನ್ನಾ ಕಬೂಲಿ ಆಗುವಿಯೋ ಅಥವಾ ವಿಚಾರಣೆ ಆಗಬೇಕೋ?

ಉಃ

ಸದರೀ ಅಪರಾಧಗಳು ಇದೆ ನ್ಯಾಯಾಲಯದವ್ಯಾಪ್ತಿಯಲ್ಲಿ ಬರುವದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

ಸ್ಥಳಃ ಗೋಕಾಕ
ದಿಃ 02-08-2021

2 ನೇ ಹೆ.ದಿ.ನ್ಯಾ.ದಂ., ಗೋಕಾಕ